



## ಅಪರೂಪದ ಮಣಿ ಮಂಚ

ವಿಜಯನಗರದ ಕೊಟ್ಟೂರು ಗ್ರಾಮದಲ್ಲಿರುವ ಶ್ರೀ ಕೊಟ್ಟೂರೇಶ್ವರ ಸನ್ನಿಧಿಗೆ ಬರುವ ಭಕ್ತರು, ಕೊಟ್ಟೂರೇಶ್ವರರು ಜೀವಂತ ಯೋಗ ಸಮಾಧಿಯಾದ 'ಗಚ್ಚಿನ ಮಠ'ಕ್ಕೂ ಭೇಟಿ ನೀಡುತ್ತಾರೆ. ಕೊಟ್ಟೂರೇಶ್ವರರ ಜೀವಂತ ಯೋಗಸಮಾಧಿಯ ಎಡಭಾಗದಲ್ಲಿರಿಸಲಾಗಿರುವ ಅಪರೂಪದ 'ಮಣಿ ಮಂಚ' ಭಕ್ತರನ್ನು ಆಕರ್ಷಿಸುತ್ತದೆ. ಮಂಚ ಏಳು ಅಡಿ ಉದ್ದ, ಐದು ಮುಕ್ಕಾಲು ಅಡಿ ಅಗಲವಿದ್ದು, ಎರಡೂವರೆ ಅಡಿ ಎತ್ತರವಿದೆ. ಕೊಟ್ಟೂರೇಶ್ವರರ ವರದಿಂದ ಮಕ್ಕಳ ಭಾಗ್ಯ ಪಡೆದ ಅಕ್ಬರ್ ಚಕ್ರವರ್ತಿ, ರತ್ನಖಚಿತ ಖಡ್ಗ ಮತ್ತು ಮಣಿ ಮಂಚವನ್ನು ಕೊಡುಗೆಯಾಗಿ ನೀಡಿದರಂತೆ. ಈ ಮಂಚ ಎಷ್ಟು ಪೂಜನೀಯವೆಂದರೆ, ಹಾಸಿಗೆ ಮತ್ತು ಮಂಚವನ್ನು ಬಳಸಲು ಕೊಟ್ಟೂರೇಶ್ವರರು ಮಾತ್ರ ಅರ್ಹರೆಂಬ ನಂಬಿಕೆಯಿದೆ. ಕೊಟ್ಟೂರೇಶ್ವರ ದೇವರನ್ನು ಮನೆದೇವರೆಂದು ಪೂಜಿಸುವ ಮನೆತನದವರ್‍ಯಾರೂ ತಮ್ಮ ಮನೆಗಳಲ್ಲಿ ಮಲಗಲು ಮಂಚಗಳನ್ನು ಬಳಸುವುದಿಲ್ಲ.

–ಜಿ. ನಾಗೇಂದ್ರ, ಕಾವೂರು, ಸಂಡೂರು





## ಮಳೆಗಾಲದ ಆದಾಯ ಮಂತುಹುಳಿ

ಮಂತುಹುಳಿ ಹಣ್ಣು ಮಳೆಗಾಲದಲ್ಲಿ ಮಲೆನಾಡಿನ ಕಾಡುಗಳಲ್ಲಿ ಸಿಗುವ ಅಪರೂಪದ ಹಣ್ಣು. ಕಿತ್ತಳೆ ಹಣ್ಣಿನ ತೊಳೆಗಳನ್ನು ಜೋಡಿಸಿಟ್ಟಂತೆ ಕಾಣುವ ಈ ಹಣ್ಣು ಕಿತ್ತಳೆ ಬಣ್ಣವನ್ನೇ ಹೋಲುತ್ತದೆ. ಇದರ ರುಚಿ ಬಹಳ ಹುಳಿಯಾಗಿರುವುದರಿಂದ ಇದನ್ನು ಮನುಷ್ಯರು ಹಾಗೇ ತಿನ್ನಲು ಸಾಧ್ಯವಿಲ್ಲ, ಪ್ರಾಣಿ ಪಕ್ಷಿಗಳಿಗೆ ಮಾತ್ರ ಮಳೆಗಾಲದಲ್ಲಿ ಒಳ್ಳೆಯ ಆಹಾರವಾಗುತ್ತದೆ. ಇಲ್ಲಿ ಮುಖ್ಯವಾದ ವಿಷಯವೆಂದರೆ ಈ ಹಣ್ಣು ಮಲೆನಾಡಿಗರ ಒಂದು ಸಣ್ಣ ಆದಾಯದ ಮೂಲವೂ ಆಗಿರುವುದು. ಕಾಡಿನಿಂದ ಹಣ್ಣು ತಂದು ಎರಡು ಭಾಗ ಮಾಡಿ, ಒಳಗಿನ ಬೀಜವನ್ನು ತೆಗೆದು, ಬೆಂಕಿಯಲ್ಲಿ ಒಣಗಿಸಿದರೆ ಮಾರಲು ಅದು ಸಿದ್ಧ. ಒಂದು ಕೆ.ಜಿ.ಗೆ ₹50 ರಿಂದ ₹200ವರೆಗೂ ಬೆಲೆ ಇದೆ. ವಿನೆಗರ್‌ನಂತಹ ಸಿದ್ಧ ಹುಳಿಯ ತಯಾರಿಕೆಗೆ ಬಳಕೆಯಾಗುವುದರಿಂದ ಇದೊಂದು ವಾಣಿಜ್ಯ ಬೆಳೆಯಾಗಿದೆ. ಇದರ ಬೀಜದಿಂದ ಮನೆಯಲ್ಲಿ ತಯಾರಿಸುವ ಎಣ್ಣೆ ತುಪ್ಪದಷ್ಟೇ ರುಚಿ ಆಗಿರುತ್ತದೆ. ಈ ಎಣ್ಣೆ ಕೊಬ್ಬು ರಹಿತವಾಗಿದ್ದು, ಆರೋಗ್ಯಕರ. ಕೆಲ ವರ್ಷಗಳ ಹಿಂದೆ ಮನೆ ಬಳಕೆಗಾಗಿ ಒಂದು ವರ್ಷಕ್ಕಾಗುವಷ್ಟು ಎಣ್ಣೆಯನ್ನು ತಯಾರಿಸಿ ಶೇಖರಿಸಿ ಇಟ್ಟುಕೊಳ್ಳುತ್ತಿದ್ದರು. ಈಗಿನ ಬಿಡುವಿಲ್ಲದ ಹಾಗೂ ಸುಲಭ ಜೀವನಶೈಲಿಯಲ್ಲಿ ಇದೆಲ್ಲ ಸಾಧ್ಯವಾಗುತ್ತಿಲ್ಲ, ಆದರೂ ಇಂತಹ ಹಣ್ಣಿನ ಮರಗಳನ್ನು ಉಳಿಸಿ ಬೆಳೆಸುವುದು ಉತ್ತಮ.

–ಜಯಂತಿ ರಾಘವೇಂದ್ರ, ಆಗುಂಬೆ

